## ನಿಮ್ಮೊಡನೆ

# ಇದೆಂಥ ಹೀನಾಯ ಶಿಕ್ಷೆ?

ಹಾಸಿಗೆಯಲ್ಲಿ ಮೂತ್ರ ಮಾಡಿಕೊಳ್ಳುವುದು ಅನೇಕ ಮಕ್ಕಳಲ್ಲಿ ಇರುವಂತಹ ಮಾಮೂಲಿ ಸಮಸ್ಯೆ. ಇದನ್ನು ನೀವು ಅನುಚಿತ ವರ್ತನೆ ಎಂದು ಹೇಗೆ ಹೇಳುತ್ತೀರಿ? ಇದಕ್ಕಾಗಿ ಶಿಕ್ಷೆ ಎಂದು ಅದೇ ಮೂತ್ರವನ್ನು ಕುಡಿಯುವ ಶಿಕ್ಷೆಯನ್ನು ವಿಧಿಸುವಂತಹವರನ್ನು ನಮ್ಮ ಶೈಕ್ಷಣಿಕ ವ್ಯವಸ್ಥೆಯ ಹುದ್ದೆಯಲ್ಲಿ ಸಹಿಸಿಕೊಳ್ಳುವುದು ಹೇಗೆ ತಾನೆ ಸಾಧ್ಯ?



ಅಭಿಜಿತ್ ಜಿ.ಕೆ.

ಹಾಸಿಗೆಯಲ್ಲಿ ಮೂತ್ರ ಮಾಡಿದ ತಪ್ಪಿಗೆ ಅದೇ ಮೂತ್ರ ಕುಡಿಯುವಂತಹ ಶಿಕ್ಷೆ. ಅದೂ ಒದ್ದೆ ಹಾಸಿಗೆಗೆ ಉಪ್ಪು ಉದುರಿಸಿ ಹಾಸಿಗೆ ಹೊದಿಕೆಯನ್ನು ಹಿಂಡಿ ಮೂತ್ರ ಕುಡಿಸುವಂತಹ ಕ್ರೂರ ಶಿಕ್ಷೆ. ಈ ಶಿಕ್ಷೆ ಅನುಭವಿಸಿದ್ದು 10 ವರ್ಷದ ಐದನೇ ತರಗತಿಯ ವಿದ್ಯಾರ್ಥಿನಿ. ಸಹಪಾಠಿಗಳ ಎದುರು ಹೀಗೆ  ಅವಮಾನ ಮಾಡುವುದರಿಂದ ಈ ಸಮಸ್ಯೆ ಪರಿಹಾರ ಆಗುತ್ತದೆ ಎಂಬುದು ಹಾಸ್ಟೆಲ್ ವಾರ್ಡನ್‌ನ ನಂಬಿಕೆ. ಈ ಪ್ರಕರಣ ನಡೆದದ್ದು ಪಶ್ಚಿಮ ಬಂಗಾಳದಲ್ಲಿ. ಅದೂ ವಿಶ್ವಮಾನ್ಯರಾದ ಗುರುದೇವ ರವೀಂದ್ರನಾಥ ಟ್ಯಾಗೋರ್ ಅವರು ಸ್ಥಾಪಿಸಿದ ಶಾಂತಿನಿಕೇತನದ 'ವಿಶ್ವ ಭಾರತಿ' ವಿಶ್ವವಿದ್ಯಾಲಯದಲ್ಲಿ. ಗುರುದೇವರು ಪ್ರತಿಪಾದಿಸಿದ ಉದಾತ್ತ ಮೌಲ್ಯಗಳ ಅರಿವು ಇರುವವರಿಗೆ ಈ ಪ್ರಕರಣ ತೀವ್ರ ಆಘಾತ ಉಂಟುಮಾಡುವಂತಹದ್ದು. ಸಹಜವಾಗಿಯೇ ಇದು ರಾಷ್ಟ್ರದಾದ್ಯಂತ ವಿವಾದ ಸೃಷ್ಟಿಸಿದೆ. ಆದರೆ 'ಸ್ವಮೂತ್ರ ಕುಡಿಯುವುದು ತಪ್ಪೇನಲ್ಲ. ನನಗೂ ಈ ಸಮಸ್ಯೆ ಇತ್ತು. ಸ್ವಮೂತ್ರಪಾನದಿಂದ ಪರಿಹರಿಸಿಕೊಂಡೆ' ಎನ್ನುತ್ತಾ ರಾಜಕಾರಣಿ ಹಾಗೂ ಸಾಮಾಜಿಕ ಕಾರ್ಯಕರ್ತರಾದ ಸ್ವಾಮಿ ಅಗ್ನಿವೇಶ್, ಹಾಸ್ಟೆಲ್ ವಾರ್ಡನ್‌ಅನ್ನು ಸಮರ್ಥಿಸಿದ್ದು ವಿವಾದದ ಬೆಂಕಿಗೆ ತುಪ್ಪ ಸುರಿದಂತಾಗಿದೆ. ತಮ್ಮ ಇಂತಹ ಮಾತುಗಳಿಂದ ಈ ವಿವಾದದ ಗಂಭೀರತೆಯನ್ನು ಕುಗ್ಗಿಸುವುದು ಸಲ್ಲದು ಎಂದು ಅಗ್ನಿವೇಶ್ ವಿರುದ್ಧ ಟೀಕೆಗಳ ಪ್ರವಾಹವೇ ಹರಿದಿದೆ.

ಇಲ್ಲಿ ಪ್ರಶ್ನೆ ಇರುವುದು ಶಾಲಾ ಮಕ್ಕಳಿಗೆ ನೀಡುವ ಶಿಕ್ಷೆಯ ವಿಧಾನಗಳ ಕುರಿತು. ಸುಪ್ರೀಂಕೋರ್ಟ್ ನಿರ್ದೇಶನದ ಪ್ರಕಾರ, ಶಿಸ್ತಿನ ಹೆಸರಲ್ಲಿ ಮಕ್ಕಳಿಗೆ ಯಾವುದೇ ಬಗೆಯ ದೈಹಿಕ ಶಿಕ್ಷೆ ನೀಡುವುದೂ ನಿಷಿದ್ಧ. ಶಿಸ್ತು ಹಾಗೂ ಶಿಕ್ಷೆ, ಶಿಕ್ಷೆ ಹಾಗೂ ಕ್ರೌರ್ಯದ ನಡುವೆ ಇರುವ ಅಂತರ ಏನು? ಶಿಸ್ತು ಮೂಡಿಸಲು ಶಿಕ್ಷೆ ಬೇಕೇ ಬೇಕೆ? ಹಾಗಿದ್ದರೆ ಯಾವ ರೀತಿಯ ಶಿಕ್ಷೆ ಎಷ್ಟರ ಮಟ್ಟಿಗೆ ನೀಡಬಹುದು? ಈ ಬಗೆಗೆ ಮೊದಲು ನಮ್ಮ ಶೈಕ್ಷಣಿಕ ವ್ಯವಸ್ಥೆಯಲ್ಲಿ ಸಂವೇದನಾಶೀಲತೆ ಮೂಡಬೇಕಿದೆ.

ವಸತಿ ಶಾಲೆಗೆ ಮಗಳನ್ನು ಸೇರಿಸಿದ ಉದ್ದೇಶ ಮಗುವಿಗೆ ಅತ್ಯುತ್ತಮ ಶಿಕ್ಷಣ ದೊರಕಲಿ ಎಂಬುದಾಗಿತ್ತು ಎಂದಿದ್ದಾರೆ ಪೋಷಕರು. ಆದರೆ ಅತ್ಯುತ್ತಮ ಶಿಕ್ಷಣದ ಪರಿಕಲ್ಪನೆಗಳನ್ನೆಲ್ಲಾ ಶಾಲಾ ವಸತಿಗೃಹದ ವಾರ್ಡನ್ ಉಮಾ ಪೊದ್ದಾರ್ ನುಚ್ಚುನೂರು ಮಾಡಿದ್ದಾರೆ. ಚೈತನ್ಯದಾಯಕವಾದ ಬಾಲ್ಯದ ಬದುಕಿನ ಮೇಲೆ ದೌರ್ಜನ್ಯ ಎಸಗುವಂತಹದ್ದು ಉತ್ತಮ ಶಿಕ್ಷಣ ವಿಧಾನದಲ್ಲಿ ಸೇರುವುದಾದರೂ ಹೇಗೆ? ಇದು ಮಗುವಿನ ಸ್ಮೃತಿಯಲ್ಲಿ ಉಳಿಸುವಂತಹದ್ದು ಕ್ರೂರ ನೆನಪನ್ನು ಮಾತ್ರ. ಘಾಸಿಗೊಳಗಾದ ಪುಟ್ಟ ಮನದ ಚೇತರಿಕೆಗೆ ಸೂಕ್ಷ್ಮ ನಿರ್ವಹಣೆ ಅಗತ್ಯವಾಗುತ್ತದೆ. ಹೀಗಾಗಿಯೇ ಈ ಬಾಲೆಯನ್ನೀಗ ಆಕೆಯ ಪೋಷಕರು ಬೇರೆಯದೇ ಶಾಲೆಗೆ ಸೇರಿಸಿದ್ದಾರೆ.

ಹಾಸಿಗೆಯಲ್ಲಿ ಮೂತ್ರ ಮಾಡಿಕೊಳ್ಳುವುದು ಅನೇಕ ಮಕ್ಕಳಲ್ಲಿ ಇರುವಂತಹ ಮಾಮೂಲಿ ಸಮಸ್ಯೆ. ಇದನ್ನು ನೀವು ಅನುಚಿತ ವರ್ತನೆ  (ಮಿಸ್‌ಬಿಹೇವಿಯರ್) ಎಂದು ಹೇಗೆ ಹೇಳುತ್ತೀರಿ? ಇಂತಹ ಸಮಸ್ಯೆ ಇರುವ ಮಕ್ಕಳು ಕೆಲವೊಮ್ಮೆ ಒಳಗೇ ಅವಮಾನ, ನಾಚಿಕೆ, ಅಸುರಕ್ಷತೆಯ ಭಾವವನ್ನೂ ಅನುಭವಿಸುತ್ತಿರುತ್ತಾರೆ. ಅಂತಹದರಲ್ಲಿ ಹೀನಾಯವಾದ ಕ್ರೂರ ಶಿಕ್ಷೆಯ ಮೂಲಕ ಅವಮಾನಿಸುವುದು ಎಂದರೆ ಮಗುವಿನ ಪಾಡು ಏನಾಗಬೇಡ? ಕೆಲವೊಂದು ವೈಜ್ಞಾನಿಕ ಕ್ರಮಗಳು ಅಥವಾ ಆಪ್ತ ಸಲಹೆಯ ಮೂಲಕ ಈ ಸಮಸ್ಯೆಯ ಪರಿಹಾರ ಸಾಧ್ಯ ಎಂಬುದೂ ತಿಳಿದಿರದ ವ್ಯಕ್ತಿ, ಹಾಸ್ಟೆಲ್ ವಾರ್ಡನ್ ಆಗಲು ಎಷ್ಟರ ಮಟ್ಟಿಗೆ ಅರ್ಹರು? ಸದ್ಯಕ್ಕೆ ತಪ್ಪಿತಸ್ಥ ವಾರ್ಡನ್ ಬಂಧನಕ್ಕೊಳಗಾಗಿ ಜಾಮೀನಿನ ಮೇಲೆ ಬಿಡುಗಡೆ ಆಗಿದ್ದಾರೆ. ಆದರೆ ಜಾಮೀನು ನೀಡಬಹುದಾದ ಸೆಕ್ಷನ್‌ಗಳಡಿ ಮೊಕದ್ದಮೆ ದಾಖಲಿಸಿದ ಪೊಲೀಸರನ್ನು ಜಾಮೀನು ಕೊಡುವ ಸಂದರ್ಭದಲ್ಲಿ ಬೋಲ್‌ಪುರ್ ಉಪವಿಭಾಗೀಯ ನ್ಯಾಯಾಲಯ ತರಾಟೆಗೆ ತೆಗೆದುಕೊಂಡಿದ್ದು ಸರಿಯಾಗಿಯೇ ಇತ್ತು. ಹಾಗೆಯೇ ವಿಶ್ವವಿದ್ಯಾಲಯದೊಳಗೆ ಅಕ್ರಮ ಪ್ರವೇಶ ದೂರಿನ ಮೇಲೆ ಬಾಲಕಿಯ ತಂದೆತಾಯಿಯರನ್ನು ಬಂಧಿಸಿದ್ದ ಪೊಲೀಸರ ಕ್ರಮವನ್ನೂ ಕೋರ್ಟ್ ತೀವ್ರವಾಗಿಯೇ ಟೀಕಿಸಿದೆ.

ಹಾಸ್ಟೆಲ್‌ಗಳು ಅಥವಾ ವಸತಿಶಾಲೆಗಳ ನಿರ್ವಹಣೆಯಲ್ಲಿ ಹೆಚ್ಚಿನ ಪಾರದರ್ಶಕತೆಯ ಅಗತ್ಯವನ್ನು ಈ ಘಟನೆ ಸಾರಿ ಹೇಳುತ್ತದೆ. ನಿಯಮಿತವಾಗಿ ಇಂತಹ ಸಂಸ್ಥೆಗಳ ಕಾರ್ಯವೈಖರಿಯ ಬಗೆಗೆ ಪ್ರಜ್ಞಾವಂತ ವ್ಯಕ್ತಿಗಳನ್ನೊಳಗೊಂಡ ತಂಡಗಳಿಂದ 'ಸಾಮಾಜಿಕ ಆಡಿಟ್'ಗಳು ನಡೆಯಬೇಕಾದುದು ಅಗತ್ಯ ಎಂಬಂತಹ ಮಕ್ಕಳ ಹಕ್ಕುಗಳ ರಕ್ಷಣೆಗೆ  ರಾಷ್ಟ್ರೀಯ ಆಯೋಗದ ಅಧ್ಯಕ್ಷೆ ಡಾ ಶಾಂತಾ ಸಿನ್ಹಾ ಅವರ ಮಾತು ಬಹುಶಃ ಅನುಷ್ಠಾನಯೋಗ್ಯ.

■ ಸಿ.ಜಿ.ಮಂಜುಳಾ